ಪ್ರಜಾ ಭಾರತ

ಕನ್ನಡ ದಿನಪತ್ರಿಕೆ   ಸತ್ಯದ ಪರ - ಪ್ರಜೆಗಳ ಧ್ವನಿ..!



ಸಿದ್ದರಾಮಯ್ಯ ಸ್ಟಿಂಗ್ ಆಪರೇಷನ್ ಕೇಸ್‌ಗೆ ಸಿಕ್ತು ಟ್ವಿಸ್ಟ್: ದೆಹಲಿಯಲ್ಲಿ ಸಿಕ್ಕಿಬಿದ್ದ ಮೊದಲ ಆರೋಪಿ ಅರೆಸ್ಟ್

ಸಂಪಾದಕ: ದಿನೇಶ್ ಬೆಳ್ಳಾವರ, ಮೊ: 94821 01707   Email. prajabharathanews@gmail.com   ಸಹ ಸಂಪಾದಕ : ಬಿ.ಬಿ ಶಿವರಾಜು, ಮೊ: 98809 08468

Volume-01 Issue-55 HASSAN Date : 25.10.2026 SUNDAY Reg No.PRGI No. KNKAN/26/A6168 Page-02 Rs.1.00

ಸಂಪುಟ–01 ಸಂಚಿಕೆ–55 ಹಾಸನ ದಿನಾಂಕ: 25.10.2026 ಭಾನುವಾರ ರಿ.ನಂ.PRGI No. KNKAN/26/A6168 ಪುಟ:02 ಬೆಲೆ:1.00ರೂ.

900 ವರ್ಷಗಳ ಇತಿಹಾಸದ ಯಗಚಿ ಸೇತುವೆಗೆ ಕಾಯಕಲ್ಪ ಯಾವಾಗ?

ಶಿಥಿಲಾವಸ್ಥೆಗೆ ತಲುಪಿದ ಪಾರಂಪರಿಕ ಸೇತುವೆ । ಅಧಿಕಾರಿಗಳಿಗೆ 2 ದಿನಗಳ ಗಡುವು

ಪ್ರಜಾ ಭಾರತ ವರದಿ

ಬೇಲೂರು: ವಿಶ್ವವಿಖ್ಯಾತ ಶ್ರೀ ಚೆನ್ನಕೇಶವಸ್ವಾಮಿ ದೇವಾಲಯದ ಮೂಲಕ ಐತಿಹಾಸಿಕ ಖ್ಯಾತಿ ಪಡೆದಿರುವ ಬೇಲೂರಿನಲ್ಲಿ, ಸುಮಾರು 900 ವರ್ಷಗಳ ಇತಿಹಾಸ ಹೊಂದಿದೆ ಎನ್ನಲಾದ ಯಗಚಿ ಹಳೇ ಸೇತುವೆ ಇಂದು ಶಿಥಿಲಾವಸ್ಥೆಯ ಆತಂಕ ಎದು–ರಿಸುತ್ತಿದೆ. ಪಾರಂಪರಿಕ ಮಹತ್ವ ಹೊಂದಿರುವ ಈ ಸೇತುವೆಯ ಸಂರಕ್ಷಣೆ ಮತ್ತು ದುರಸ್ತಿಗೆ ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದರೂ ಶಾಶ್ವತ ಪರಿಹಾರ ದೊರೆತಿಲ್ಲ ಎಂಬ ಆರೋಪ ಕೇಳಿಬಂದಿದೆ. ಅಧಿಕಾ–ರಿಗಳ ನಿರ್ಲಕ್ಷ್ಯ ಹಾಗೂ ಇಲಾಖೆಗಳ ನಡುವಿನ ಜವಾಬ್ದಾರಿ ವರ್ಗಾವಣೆಯಿಂದ ಸೇತುವೆಯ ಭವಿಷ್ಯ ಅನಿಶ್ಚಿತತೆಯಲ್ಲಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಆಕ್ರೋಶ ವ್ಯಕ್ತಪಡಿಸಿದೆ.





ಪಟ್ಟಣದ ಯಗಚಿ ಹಳೇ ಸೇತುವೆ ಬಳಿ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ 2 ದಿನಗಳ ಗಡುವು ನೀಡಿದ್ದಾರೆ. ಈ ಅವಧಿಯೊಳಗೆ ದುರಸ್ತಿ ಕಾರ್ಯ ಆರಂಭಿಸದಿದ್ದರೆ ಸೇತುವೆ ರಸ್ತೆಯನ್ನು ತಡೆದು, ಸ್ಥಳದಲ್ಲೇ ಅಡುಗೆ ಮಾಡುವ ಮೂಲಕ ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ.

● **ಇತಿಹಾಸದ ಹೆಗ್ಗುರುತಿಗೆ ನಿರ್ಲಕ್ಷ್ಯದ ಕಳಂಕ**

ಸೇತುವೆಯ ದುರಸ್ತಿಗಾಗಿ ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಿದ್ದರೂ ಯಾವುದೇ ಶಾಶ್ವತ ಕ್ರಮ ಕೈಗೊಂಡಿಲ್ಲ ಎಂಬುದು ಹೋರಾಟಗಾರರ ಪ್ರಮುಖ ಆರೋಪ. ಸೇತುವೆಯ ನಿರ್ವಹಣೆ ಯಾರ ಹೊಣೆ ಎಂಬ ವಿಚಾರದಲ್ಲಿ ಪುರಸಭೆ ಮತ್ತು ಲೋಕೋಪಯೋಗಿ ಇಲಾಖೆ ಪರಸ್ಪರ ಜವಾಬ್ದಾರಿ ವರ್ಗಾಯಿಸುತ್ತಿವೆ. ಆದರೆ ಸೇತುವೆಯ ಸಂರಕ್ಷಣೆಗೆ ಅಗತ್ಯ ಕ್ರಮಗಳು ಮಾತ್ರ ಕೈಗೂಡುತ್ತಿಲ್ಲ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಈ ಕುರಿತು ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಚಂದ್ರಶೇಖರ್, ಶ್ರೀ ಚೆನ್ನಕೇಶವಸ್ವಾಮಿ ದೇವಾಲಯದಷ್ಟೇ ಐತಿಹಾಸಿಕ ಮಹತ್ವ ಹೊಂದಿರುವ ಯಗಚಿ ಹಳೇ ಸೇತುವೆಯನ್ನು ಉಳಿಸುವುದು ಎಲ್ಲರ ಜವಾಬ್ದಾರಿ. ಹಲವು ವರ್ಷಗಳಿಂದ ದುರಸ್ತಿಗೆ ಒತ್ತಾಯಿಸುತ್ತಿದ್ದರೂ ಅಧಿಕಾ–ರಿಗಳು ಶಾಶ್ವತ ಪರಿಹಾರ ಕಲ್ಪಿಸಿಲ್ಲ. ಇತಿಹಾಸದ ಹೆಗ್ಗುರುತನ್ನು ಉಳಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿರುವುದುವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

● **ಸುಣ್ಣಬಣ್ಣವಲ್ಲ, ಶಾಶ್ವತ ಪರಿಹಾರ ಬೇಕು**

ಸೇತುವೆಯ ಸುತ್ತಮುತ್ತ ಗಿಡಗಂಟಿಗಳು ಬೆಳೆದು ನಿಂತಿದ್ದರೂ ಅವುಗಳನ್ನು ತೆರವುಗೊಳಿಸುವ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಪ್ರತಿಭಟನೆ ನಡೆದಾಗ ಕಾಟಾಚಾರಕ್ಕೆ ಸುಣ್ಣಬಣ್ಣ ಬಳಿದು ಅಧಿಕಾರಿಗಳು ತಮ್ಮ ಜವಾಬ್ದಾರಿ

ದುರಸ್ತಿ ಆರಂಭಿಸದಿದ್ದರೆ ರಸ್ತೆ ತಡೆದು ಸ್ಥಳದಲ್ಲೇ ಅಡುಗೆ ಮಾಡಿ ಅನಿರ್ದಿಷ್ಟಾವಧಿ ಹೋರಾಟದ ಎಚ್ಚರಿಕೆ

ಮುಗಿದಂತೆ ವರ್ತಿಸುತ್ತಿದ್ದಾರೆ ಎಂದು ವೇದಿಕೆಯ ತಾಲೂಕು ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್ ದೂರಿದರು. ಈ ರಸ್ತೆಯಲ್ಲಿ ಎರಡು ಸೇತುವೆಗಳಿದ್ದರೂ ವಾಹನಗಳ ದಟ್ಟಣೆಯಿಂದ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಹೀಗಾಗಿ ಕೇವಲ ಮೇಲ್ನೋಟದ ಕೆಲಸಗಳಿಗೆ ಸೀಮಿತವಾಗದೆ, ಸೇತುವೆಯ ಸ್ಥಿತಿಗತಿ ಪರಿಶೀಲಿಸಿ ಅಗತ್ಯ ದುರಸ್ತಿ ಕೈಗೊಳ್ಳಬೇಕು. ಶಾಶ್ವತ ಪರಿಹಾರ ದೊರೆಯುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಅವರು ಎಚ್ಚರಿಸಿದರು.

● **ಎರಡು ದಿನಗಳಲ್ಲಿ ಕ್ರಮ ಕೈಗೊಳ್ಳುವರೇ ಅಧಿಕಾ–ರಿಗಳು**

ಐತಿಹಾಸಿಕ ಸ್ಮಾರಕಗಳು ಮತ್ತು ಪಾರಂಪ–ರಿಕ ತಾಣಗಳ ಸಂರಕ್ಷಣೆಯ ಕುರಿತು ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲೇ, ಬೇಲೂರಿನ ಯಗಚಿ ಹಳೇ ಸೇತುವೆಯ ದುರಸ್ತಿ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ಸೇತುವೆಯ ನೈಜ ಸ್ಥಿತಿಗತಿಯ ತಾಂತ್ರಿಕ ಪರಿಶೀಲನೆ ನಡೆಸಿ, ಹೊಣೆಗಾರ ಇಲಾಖೆಯನ್ನು ಸ್ಪಷ್ಟಪಡಿಸಿ, ಅಗತ್ಯ ದುರಸ್ತಿ ಕಾರ್ಯಕ್ಕೆ ಚಾಲನೆ ನೀಡಬೇಕೆಂಬುದು ಸಾರ್ವಜನಿಕರ ನಿರೀಕ್ಷೆಯಾಗಿದೆ.

ಕರ್ನಾಟಕ ರಕ್ಷಣಾ ವೇದಿಕೆ ನೀಡಿರುವ 2 ದಿನಗಳ ಗಡುವಿನೊಳಗೆ ಅಧಿಕಾರಿಗಳು ಸ್ಪಂದಿಸಿ ಕ್ರಮ ಕೈಗೊಳ್ಳುತ್ತಾರೆಯೇ ಅಥವಾ ಹೋರಾಟ ಅನಿರ್ದಿಷ್ಟಾವಧಿಗೆ ವಿಸ್ತರಿಸಲಿದೆಯೇ ಎಂಬುದು ಈಗ ಕುತೂಹಲ ಮೂಡಿಸಿದೆ.

ಇತಿಹಾಸದ ಸಾಕ್ಷಿಯಾಗಿ ಉಳಿದಿರುವ ಸೇತುವೆಯನ್ನು ಮುಂದಿನ ಪೀಳಿಗೆಗೂ ಸುರಕ್ಷಿತವಾಗಿ ಉಳಿಸಬೇಕಾದ ಹೊಣೆಗಾರಿಕೆ ಸಂಬಂಧಪಟ್ಟ ಇಲಾಖೆಗಳ ಮೇಲಿದೆ.

ಪ್ರತಿಭಟನೆಯಲ್ಲಿ ಕರವೇ ಗೌರವ ಅಧ್ಯಕ್ಷ ಕುಮಾರ್, ಜಗದೀಶ್, ಉಪಾಧ್ಯಕ್ಷ ಹನೀಫ್, ಮಾದ್ಯಮ ವಕ್ತಾರ ದಿನೇಶ್ ಬೆಳ್ಳಾವರ, ಕಾರ್ಯದರ್ಶಿ ಪ್ರಸನ್ನ, ಸಾಂಸ್ಕೃತಿ–ಕ ಘಟಕದ ಅಧ್ಯಕ್ಷ ನರಸಿಂಹ ಸ್ವಾಮಿ, ಚಂದ್ರೇಗೌಡ, ಮದನ್, ರಮೇಶ್, ಮಹೇಶ್ ಗೌಡ, ಆನಂದ್ ಸೇ–ರಿದಂತೆ ಇನ್ನಿತರರು ಹಾಜರಿದ್ದರು.

ರಸ್ತೆ ಮಧ್ಯೆಯೇ ಕೆಎಸ್‌ಆರ್‌ಟಿಸಿ ಬಸ್ ದುರಸ್ತಿ; ವಾಹನ ಸಂಚಾರಕ್ಕೆ ಅಡಚಣೆ



ಪ್ರಜಾ ಭಾರತ ವರದಿ

ಹಾಸನ: ಪ್ರಯಾಣಿಕರನ್ನು ಕೂರಿಸಿಕೊಂಡು ಬಸ್ ನಿಲ್ದಾಣದ ಕಡೆಗೆ ಸಂಚರಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಮುಂಭಾಗದ ಬಲಭಾಗದ ಚಕ್ರದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡ ಪರಿಣಾಮ, ನಗರದ ಹೊಸಕೊಪ್ಪಲು ಸಮೀಪ ರಸ್ತೆ ಮಧ್ಯೆಯೇ ಬಸ್ ನಿಲ್ಲಿಸಿ ಚಕ್ರ ಬದಲಿಸುವ ಕಾರ್ಯವನ್ನು ಸಿಬ್ಬಂದಿ ಕೈಗೊಂಡ ಘಟನೆ ಶನಿವಾರ ನಡೆದಿದೆ.

ಬಸ್ ಅನ್ನು ರಸ್ತೆಯ ಮಧ್ಯೆಯೇ ನಿಲ್ಲಿಸಿ ದುರಸ್ತಿ ಕಾರ್ಯ ನಡೆಸಿದ್ದು, ಮಳೆಯಿಂದ ರಸ್ತೆ ಬದಿಯಲ್ಲಿ ಕೆಸರು ತುಂಬಿಕೊಂಡಿದ್ದ ಸಂದರ್ಭದಲ್ಲಿ ಈ ಮಾರ್ಗದಲ್ಲಿ ಸಂಚ–ರಿಸುತ್ತಿದ್ದ ಇತರ ವಾಹನಗಳ ಚಾಲಕರು ಸಂಚಾರಕ್ಕೆ ಸ್ವಲ್ಪ ತೊಂದರೆ ಅನುಭವಿಸಬೇಕಾಯಿತು. ಬಸ್‌ನ ಚಕ್ರದಲ್ಲಿ ಸಮಸ್ಯೆ ಕಾಣಿಸಿಕೊಂಡ ತಕ್ಷಣ ಸಿಬ್ಬಂದಿ ದುರಸ್ತಿ ಕಾರ್ಯಕ್ಕೆ ಮುಂದಾದರು. ಬಳಿಕ ಚಕ್ರವನ್ನು ಸರಿಪಡಿಸಿ ಬದಲಿ ಚಕ್ರ ಅಳವಡಿಸಿ ಬಸ್ ಮತ್ತೆ ಪ್ರಯಾಣ ಮುಂದುವರಿಸಿದರು. ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಸಾರ್ವಜನಿಕ ಸಾರಿಗೆ ಬಸ್‌ಗಳ ತಾಂತ್ರಿಕ ಸ್ಥಿತಿಯನ್ನು ನಿಯಮಿತವಾಗಿ ಪರಿಶೀಲಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ಸಾರ್ವಜನಿಕರಿಂದ ವ್ಯಕ್ತವಾಗಿದೆ.

ಹಾಸನದಲ್ಲಿ ಫಿಟ್ ಇಂಡಿಯಾ ಫ್ರೀಡಂ ರನ್ 7.0 ಪ್ಲಾಗಿಂಗ್ ಮೂಲಕ ಪರಿಸರ ಸ್ವಚ್ಛತೆಗೆ ಜಾಗೃತಿ



ಪ್ರಜಾ ಭಾರತ ವರದಿ

ಹಾಸನ: ಸ್ವಚ್ಛತೆ ಮತ್ತು ಆರೋಗ್ಯಕರ ಜೀವನಶೈಲಿ ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕು ಎಂದು ಎಂಸಿ–ಎಫ್ ಉಪನಿರ್ದೇಶಕ ಕಿರಣ್ ತಿಳಿಸಿದರು.

ನಗರದ ದಾಸರಕೊಪ್ಪಲು ಅಂತರಿಕ್ಷ ನಗರದ ಎಂಸಿಎಫ್ ವಸತಿಗೃಹದಿಂದ ಕಚೇರಿವರೆಗೆ ಶನಿವಾರ ಆಯೋಜಿಸಿದ್ದ ಫಿಟ್ ಇಂಡಿಯಾ ಫ್ರೀಡಂ ರನ್ 7.0 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಓಟ ಹಾಗೂ ಪ್ಲಾಗಿಂಗ್ ಮೂಲಕ ಪರಿಸರ ಸ್ವಚ್ಛತೆ ಮತ್ತು ದೈಹಿಕ ಆರೋಗ್ಯದ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು. ಓಡುವಾಗ ಅಥವಾ ನಡೆಯುವಾಗ ಮಾರ್ಗದಲ್ಲಿ ಕಂಡುಬರುವ ತ್ಯಾಜ್ಯವನ್ನು ಸಂಗ್ರಹಿಸುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು.

ಸ್ವಚ್ಛ ಭಾರತ, ಸ್ವಸ್ಥ ಭಾರತ ಅಭಿಯಾನದ ಆಶಯದಂತೆ ಪ್ರತಿಯೊಬ್ಬರೂ ಸ್ವಚ್ಛತೆಗೆ ಆದ್ಯತೆ ನೀಡಬೇಕು. ನಿಯಮಿತ ವ್ಯಾಯಾಮ ಮಾಡುವುದರ ಜತೆಗೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮೂಹ ಮುಖ್ಯಸ್ಥ ಶ್ರೀಕಾಂತ್, ಸಮೂಹ ನಿರ್ದೇಶಕ ಬಾಲಾಜಿ, ಅಧಿಕಾರಿಗಳು, ಸಿಐಸ್–ಎಫ್ ಸಿಬ್ಬಂದಿ ಹಾಗೂ ಗುತ್ತಿಗೆ ನೌಕರರು ಉಪಸ್ಥಿತರಿದ್ದರು.

ಸಿಎ ಫೌಂಡೇಶನ್ ಮಾರ್ಗದರ್ಶನ ಕಾರ್ಯಕ್ರಮ ಯಶಸ್ವಿ



ಪ್ರಜಾ ಭಾರತ ವರದಿ

ಹಾಸನ: ನಗರದ ಹಾರನಳ್ಳಿ ರಾಮಸ್ವಾಮಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗಾಗಿ ಶನಿವಾರ ಆಯೋಜಿಸಿದ್ದ ಸಿಎ ಫೌಂಡೇಶನ್ ಮಾರ್ಗದರ್ಶನ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.ಸಿಎ ವಾಗೀಶ್ ಹೆಗಡೆ ಅವರು ತಮ್ಮ ತಂಡದೊಂದಿಗೆ ಪ್ರೊಜೆಕ್ಟರ್ ಮೂಲಕ ಉಪನ್ಯಾಸ ನೀಡಿ, ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಕೋರ್ಸ್‌ನ ಸ್ವರೂಪ, ಪರೀಕ್ಷಾ ವಿಧಾನ, ಸಿದ್ಧತೆ ಹಾಗೂ ವೃತ್ತಿಜೀವನದ ಅವಕಾಶಗಳ ಕುರಿತು ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ಆರಂಭದಿಂದಲೇ ಸ್ಪಷ್ಟ ಗುರಿ ಹೊಂದಿ, ಸಮಯವನ್ನು ಸಮರ್ಪಕವಾಗಿ ಬಳಸಿಕೊಂಡು ನಿರಂತರ ಅಧ್ಯಯನ ಮಾಡಿದರೆ ಸಿಎ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಬಹುದು ಎಂದು ತಿಳಿಸಿದರು. ಸಿಎ ಇಂಟರ್ಮೀಡಿಯೇಟ್ ಮತ್ತು ಫೈನಲ್ ಪರೀಕ್ಷೆಗಳ ವಿಧಾನ, ಅಂಕಗಳ ಮಾನದಂಡ ಹಾಗೂ ಸ್ವಯಂ ಅಧ್ಯಯನದ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕ ಪಾರ್ಥಾ, ಪದವಿಪೂರ್ವ ವಿಭಾಗದ ಪ್ರಾಂಶುಪಾಲೆ ಪುನೀತಾ ಹೆನ್ರಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿ ಸಿಎ ಕೋರ್ಸ್ ಕುರಿತು ಉಪಯುಕ್ತ ಮಾಹಿತಿ ಪಡೆದರು.

ಸ್ಟಿಂಗ್ ಆಪರೇಷನ್ ತನಿಖೆ ದಾರಿ ತಪ್ಪುತ್ತಿದೆ: ಎಚ್.ಡಿ.ಕುಮಾರಸ್ವಾಮಿ

ಕೆಪಿಎಸ್‌ಸಿ ಹಗರಣ ಮುಚ್ಚಿಹಾಕುವ ಆರೋಪ; ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಪ್ರಜಾ ಭಾರತ ವರದಿ



ಹಾಸನ: ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆಯನ್ನು ದಾರಿ ತಪ್ಪಿಸಲಾಗುತ್ತಿದ್ದು, ತಮ್ಮ ಪಕ್ಷದ ಕಾರ್ಯಕರ್ತರನ್ನು ಗುರಿಯಾಗಿಸಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಹಾಗೂ ಮಾವಿನಕೆರೆ ಭಾಗದಲ್ಲಿ ಶನಿವಾರ ಮಾತನಾಡಿದ ಅವರು, ಸ್ಟಿಂಗ್ ಆಪರೇಷನ್‌ನ ಹಿಂದಿರುವವರು ಯಾರು, ಅದರ ಉದ್ದೇಶವೇನು ಎಂಬ ಬಗ್ಗೆ ಸಮಗ್ರ ತನಿಖೆಯಾಗಬೇಕು. ಆದರೆ ಸರ್ಚ್ ವಾರೆಂಟ್ ಹೆಸರಿನಲ್ಲಿ ಪಕ್ಷದ ಕಾರ್ಯಕರ್ತರ ಕುಟುಂಬಗಳಿಗೆ ಕಿರುಕುಳ ನೀಡಲಾಗುತ್ತಿದ್ದು, ಮೊಬೈಲ್ ಮತ್ತು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳುವ ಮೂಲಕ ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ ಎಂದು ದೂ–ರಿದರು.

ಸ್ಟಿಂಗ್ ಆಪರೇಷನ್ ತನಿಖೆ ಶೇ.80ರಷ್ಟು ಪೂರ್ಣಗೊಂಡಿದೆ ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕೆಪಿಎಸ್‌ಸಿ ಸೇರಿದಂತೆ ವಿವಿಧ ನೇಮಕಾತಿ ಹಗರಣಗಳ ತನಿಖೆಯ ಪ್ರಗತಿಯನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಭ್ರಷ್ಟಾಚಾರ ಮತ್ತು ಅಕ್ರಮಗಳ ವಿರುದ್ಧ ಕೈಗೊಂಡ ಕ್ರಮಗಳೇನು ಎಂಬುದನ್ನು ತಿಳಿಸಬೇಕು ಎಂದು ಒತ್ತಾಯಿಸಿದರು.

ವಿಕ್ಕಿ ಸಾವಿನ ಪ್ರಕರಣದ ಬಗ್ಗೆಯೂ ಪ್ರಸ್ತಾಪಿಸಿದ ಅವರು, ಅಸಹಜ ಸಾವಿನ ಪ್ರಕರಣದಲ್ಲಿ ತನಿಖೆ, ಮರಣೋತ್ತರ ಪರೀಕ್ಷೆ ಹಾಗೂ ಪರಿಹಾರ ವಿತರಣೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಬೇಕು ಎಂದರು. ತಮ್ಮ ಆಪ್ತರು ಓಡಿಹೋಗಿದ್ದಾರೆ ಎಂಬ ಆರೋಪವನ್ನೂ ತಳ್ಳಿಹಾಕಿದ ಅವರು, ಬೇರೆ ವಿಚಾರಗಳಿಂದ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ನಡೆಯುತ್ತಿದೆ ಎಂದು ಟೀಕಿಸಿದರು.

ಎಲ್ಲ ಪ್ರಕರಣಗಳಲ್ಲೂ ನಿಷ್ಪಕ್ಷಪಾತ ತನಿಖೆ ನಡೆಸಿ ಸತ್ಯಾಂಶ ಹೊರತರಬೇಕು. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಮಾವಿನಕೆರೆಯ ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್.ಡಿ.ರೇವಣ್ಣ ಉಪಸ್ಥಿತರಿದ್ದರು.

ಹಾಸನಾಂಬೆ ದರ್ಶನಕ್ಕೆ ಸಕಲ ಸಿದ್ಧತೆ: ಶಾಸಕ ಸ್ವರೂಪ್ ಪರಿಶೀಲನೆ

ಪ್ರಜಾ ಭಾರತ ವರದಿ



ಹಾಸನ: ಹಾಸನಾಂಬೆ ಜಾತ್ರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಎಚ್.ಪಿ. ಸ್ವರೂಪ್ ಅವರು ಶನಿವಾರ ದೇವಸ್ಥಾನದ ಆವರಣಕ್ಕೆ ಭೇಟಿ ನೀಡಿ ದರ್ಶನದ ಸಿದ್ಧತೆ ಹಾಗೂ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದರು. ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ ಭಕ್ತರಿಗೆ ಸುಗಮ ದರ್ಶನಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಬಾರಿ ಧರ್ಮದರ್ಶನಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಜರ್ಮನ್ ಟೆಂಟ್ ವ್ಯವಸ್ಥೆ ಮಾಡಲಾಗುತ್ತಿದ್ದು, ಸರತಿ ಸಾಲು, ಕುಡಿಯುವ ನೀರು, ಮಳೆ ರಕ್ಷಣೆ ಸೇರಿದಂತೆ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ ಎಂದು ತಿಳಿಸಿದರು.

ಸ್ಥಳೀಯರಿಗೆ ಪ್ರತ್ಯೇಕ ಸರತಿ ಸಾಲಿನ ಬೇಡಿಕೆ ಕುರಿತು ಪ್ರತಿಕ್ರಿಯಿಸಿದ ಶಾಸಕರು, ಹೊರ ಜಿಲ್ಲೆ ಹಾಗೂ ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿರುವುದರಿಂದ ಸ್ಥಳೀಯರಿಗೆ ದರ್ಶನ ಪಡೆಯಲು ತೊಂದರೆಯಾಗುತ್ತಿದೆ ಎಂಬ ಮನವಿಗಳಿವೆ. ಆಧಾರ್ ಕಾರ್ಡ್ ಅಥವಾ ಸೂಕ್ತ ಗುರುತಿನ ದಾಖಲೆ ಆಧರಿಸಿ ಸ್ಥಳೀಯರಿಗೆ ಪ್ರತ್ಯೇಕ ಸರತಿ ಸಾಲು ಕಲ್ಪಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮಕ್ಕೆ ಪ್ರಯತ್ನಿಸಲಾಗುವುದು ಎಂದರು.

ಇದೇ ವೇಳೆ ಸೈನ್ಸ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮಗಳಿಂದ ಹಾನಿಯಾಗದಂತೆ ಸಂರಕ್ಷಣೆ ಮಾಡಬೇಕು. ಅಗತ್ಯವಿದ್ದಲ್ಲಿ ಪರ್ಯಾಯ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಪರಿಶೀಲನೆ ವೇಳೆ ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ, ಎಂಜಿನಿಯರ್ ಸತ್ಯನಾರಾಯಣ್ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

ಮಳೆಗೆ ಕೆರೆಯಂತಾದ ಬಿ.ಎಂ. ರಸ್ತೆ; ಸಾರ್ವಜನಿಕರ ಪರದಾಟ

ಪ್ರಜಾ ಭಾರತ ವರದಿ



ಸಕಲೇಶಪುರ: ಪಟ್ಟಣದಲ್ಲಿ ನಿರಂತರವಾಗಿ ಸುರಿದ ಮಳೆಯಿಂದ ಬಿ.ಎಂ. ರಸ್ತೆ ಸಂಪೂರ್ಣ ಜಲಾವೃತಗೊಂಡು ಕೆರೆಯಂತಾಗಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರು ತೀವ್ರ ತೊಂದರೆ ಅನುಭವಿಸಿದರು.

ರಸ್ತೆಯಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆನೀರು ಸರಾಗವಾಗಿ ಹ–ರಿದುಹೋಗದೆ ರಸ್ತೆಯ ಮೇಲೆಯೇ ನಿಂತಿದೆ. ಇದರಿಂದ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಸಂಚರಿಸಲು ಹರಸಾಹಸ ಪಡುವಂತಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ಮಳೆಗಾಲದಲ್ಲೂ ಇದೇ ಸಮಸ್ಯೆ ಮರುಕಳಿಸುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಶಾಶ್ವತ ಪರಿಹಾರ ಕಲ್ಪಿಸಲು ಮುಂದಾಗುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ. ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಿ, ಮಳೆನೀರು ನಿಲ್ಲದಂತೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ರೈತರ ಕಟ್ಟೆ ವ್ಯಾಪಾರಿಗಳ ವಶಕ್ಕೆ; ರೈತರು ರಸ್ತೆಗೆ

7 ದಿನಗಳ ಗಡುವು ನೀಡಿದ ಜಿಲ್ಲಾ ರೈತ ಸಂಘದ ಅಧ್ಯಕ್ಷ ತಾಂಡವೇಶ್

ಪ್ರಜಾ ಭಾರತ ವರದಿ



ಚನ್ನರಾಯಪಟ್ಟಣ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ರೈತರಿಗಾಗಿ ನಿರ್ಮಿಸಿರುವ ಹರಾಜು ಕಟ್ಟೆಗಳ ಮೇಲೆ ವ್ಯಾಪಾರಸ್ಥರು ಜೋಳ, ರಾಗಿ ಸೇರಿದಂತೆ ವಿವಿಧ ಕೃಷಿ ಉತ್ಪನ್ನಗಳ ಚೀಲಗಳನ್ನು ಇರಿಸಿದ್ದು, ಕೂಡಲೇ ಅವುಗಳನ್ನು ತೆರವುಗೊಳಿಸಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ತಾಂಡವೇಶ್ ಆಗ್ರಹಿಸಿದರು.

ಪಟ್ಟಣದ ಎಪಿಎಂಸಿ ಕಚೇರಿ ಮುಂಭಾಗದಲ್ಲಿ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ರೈತರ ಅನುಕೂಲಕ್ಕಾಗಿ ನಿರ್ಮಿಸಿರುವ ಕಟ್ಟೆಗಳನ್ನು ವ್ಯಾಪಾರಸ್ಥರು ವರ್ಷಪೂರ್ತಿ ಚೀಲಗಳನ್ನು ಸಂಗ್ರಹಿಸಲು ಬಳಸುತ್ತಿದ್ದಾರೆ. ಇದರಿಂದ ರೈತರು ತಾವು ಬೆಳೆದ ಉತ್ಪನ್ನಗಳನ್ನು ರಸ್ತೆಯಲ್ಲೇ ಇಟ್ಟು ಮಾರಾಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆ ಬಂದಾಗ ಕೃಷಿ ಉತ್ಪನ್ನಗಳು ನೆನೆಯುವ ಆತಂಕವೂ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರಿಗಾಗಿ ಮೀಸಲಿಟ್ಟ ಕಟ್ಟೆಗಳು ರೈತರಿಗೇ ಸಿಗಬೇಕು. ವ್ಯಾಪಾರಸ್ಥರು ಇರಿಸಿರುವ ಚೀಲಗಳನ್ನು 7 ದಿನಗಳೊಳಗೆ ತೆರವುಗೊಳಿಸದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಸಂಚಾಲಕ ಮೀಸೆ ಮಂಜುಣ್ಣ, ತಾಲೂಕು ರೈತ ಸಂಘದ ಉಪಾಧ್ಯಕ್ಷ ಕುಮಾರ್ ಹಾಗೂ ರೈತ ಮುಖಂಡ ದರ್ಶನ್ ಉಪಸ್ಥಿತರಿದ್ದರು.

ಪ್ರಜಾ ಭಾರತ
ಶುಭ ನುಡಿ

ಹಣಕ್ಕಿಂತ ನಂಬಿಕೆ ದೊಡ್ಡದು, ಅಧಿಕಾರಕ್ಕಿಂತ ಮಾನವೀಯತೆ ದೊಡ್ಡದು, ಯಶಸ್ಸಿಗಿಂತ ಒಳ್ಳೆಯತನ ದೊಡ್ಡದು..!!

'ಅಭಿವೃದ್ಧಿ ಶೂನ್ಯ', ಕಾಂಗ್ರೆಸ್ ಸರ್ಕಾರದ 6ನೇ ಗ್ಯಾರಂಟಿ ಸ್ಟಿಂಗ್ ಮತ್ತು ಬ್ಲ್ಯಾಕ್ ಮೇಲ್ ಭಾಗ್ಯ!

ಬೆಂಗಳೂರು: ಕಾಂಗ್ರೆಸ್ಸಿಗರು ವಿಧಾನಸೌಧದಲ್ಲಿ ಜನಸೇವೆ ಮಾಡುವ ಬದಲು 'ಡರ್ಟಿ ಪಿಕ್ಚರ್' ತೆಗೆಯುವ ಸ್ಟುಡಿಯೋ ತೆರೆದಂತಿದೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಜೆಡಿ-ಎಸ್ ಕಿಡಿಕಾರಿದೆ. ಈ ಸಂಬಂಧ ತನ್ನ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಜೆಡಿಎಸ್ ಸ್ವತಃ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರೇ ತಮ್ಮದೇ ಪಕ್ಷದವರ ಒಳಸಂಚು ಮತ್ತು ಬ್ಲ್ಯಾಕ್‌ಮೇಲ್ ತಂತ್ರಗಳ ಬಗ್ಗೆ ಕಣ್ಣೀರು ಹಾಕುತ್ತಿದ್ದಾರೆ.

ದೇಗುಲದ ಭದ್ರತೆಗೆ ಮರುಜೀವ, ರಾಜಗೋಪುರಕ್ಕೆ ಸ್ವಚ್ಛತೆಯ ಸ್ಪರ್ಶ

ಸ್ಥಗಿತಗೊಂಡಿದ್ದ ಮೆಟಲ್ ಡಿಟೆಕ್ಟರ್ ದುರಸ್ತಿ । ರಾಜಗೋಪುರ ಸ್ವಚ್ಛತಾ ಕಾರ್ಯ ಆರಂಭ

ಪ್ರಜಾ ಇಂಪ್ಯಾಕ್ಟ್

ಬೇಲೂರು: ವಿಶ್ವವಿಖ್ಯಾತ ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಭದ್ರತೆ ಮತ್ತು ಐತಿಹಾಸಿಕ ರಾಜಗೋಪುರದ ನಿರ್ವಹಣೆಯಲ್ಲಿನ ನಿರ್ಲಕ್ಷ್ಯವನ್ನು ಎತ್ತಿತೋರಿಸಿದ್ದ ಪ್ರಜಾ ಭಾರತ ದಿನಪತ್ರಿಕೆಯ ವರದಿಗೆ ಭರ್ಜರಿ ಇಂಪ್ಯಾಕ್ಟ್ ದೊರೆತಿದೆ. ಪತ್ರಿಕೆಯಲ್ಲಿ ವರದಿ ಪ್ರಕಟವಾಗುತ್ತಿದ್ದಂತೆ ಎಚ್ಚೆತ್ತ ದೇವಾಲಯದ ಆಡಳಿತ ವರ್ಗ, ಸ್ಥಗಿತಗೊಂಡಿದ್ದ ಮೆಟಲ್ ಡಿಟೆಕ್ಟರ್ ಅನ್ನು ಸರಿಪಡಿಸಿದ್ದು, ಭದ್ರತಾ ಸಿಬ್ಬಂದಿಯನ್ನೂ ನಿಯೋಜಿಸಿದೆ. ಅಲ್ಲದೆ, ರಾಜಗೋಪುರದ ಮೇಲೆ ಬೆಳೆದಿದ್ದ ಗಿಡಗಂಟೆಗಳನ್ನು ತೆರವುಗೊಳಿಸಿ ಸ್ವಚ್ಛತಾ ಕಾರ್ಯವನ್ನೂ ಆರಂಭಿಸಿದೆ.





● **ವರದಿಗೆ ಸ್ಪಂದಿಸಿದ ಆಡಳಿತ**

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ಮಹತ್ವ ಪಡೆದಿರುವ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಭದ್ರತಾ ಉಪಕರಣ ಕಾರ್ಯನಿರ್ವಹಿಸದಿರುವುದು ಮತ್ತು ರಾಜಗೋಪುರದ ಮೇಲೆ ಗಿಡಗಂಟೆಗಳು ಬೆಳೆದಿರುವುದನ್ನು ಪ್ರಜಾ ಭಾರತ ಗಂಭೀರವಾಗಿ ಪರಿಗಣಿಸಿ ವರದಿ ಪ್ರಕಟಿಸಿತ್ತು. ಅಕ್ಟೋಬರ್ 23ರ ಸಂಚಿಕೆಯಲ್ಲಿ 'ವಿಶ್ವವಿಖ್ಯಾತ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯಕ್ಕೆ ರಾಜಗೋಪುರವೇ ಕಳಂಕ' ಎಂಬ ಶೀರ್ಷಿಕೆಯಡಿ ರಾಜಗೋಪುರದ ದುಸ್ಥಿತಿಯನ್ನು ಬೆಳಕಿಗೆ ತರಲಾಗಿತ್ತು. ಅಕ್ಟೋಬರ್ 24ರ ಸಂಚಿಕೆಯಲ್ಲಿ 'ವಿಶ್ವವಿಖ್ಯಾತ ಚನ್ನಕೇಶವ ದೇಗುಲಕ್ಕೆ ಭದ್ರತಾ ಗ್ರಹಣ' ಎಂಬ ಶೀರ್ಷಿಕೆಯಡಿ ದೇವಾಲಯದ ಭದ್ರತಾ ಲೋಪದ ಕುರಿತು ವಿಸ್ತೃತ ವರದಿ ಪ್ರಕಟಿಸಲಾಗಿತ್ತು.

ಈ ವರದಿಗಳು ಆಡಳಿತ ವರ್ಗದ ಗಮನ ಸೆಳೆದಿದ್ದು, ಸ್ಥಗಿತಗೊಂಡಿದ್ದ ಮೆಟಲ್ ಡಿಟೆಕ್ಟರ್ ದುರಸ್ತಿಗೊಂಡಿದೆ. ಭದ್ರತಾ ಸಿಬ್ಬಂದಿಯನ್ನೂ ನೇಮಿಸಲಾಗಿದೆ. ರಾಜಗೋಪುರದ ಮೇಲೆ ಬೆಳೆದಿದ್ದ ಗಿಡಗಂಟೆಗಳನ್ನು ತೆರವುಗೊಳಿಸುವ ಮೂಲಕ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

> ಮಳೆಯ ಕಾರಣದಿಂದಾಗಿ ದೇವಾಲಯದ ರಾಜಗೋಪುರದ ಮೇಲೆ ಬೆಳೆದಿದ್ದ ಗಿಡಗಂಟೆಗಳನ್ನು ತೆರವುಗೊಳಿಸಲು ಸಾಧ್ಯವಾಗಿರಲಿಲ್ಲ. ಈ ಕುರಿತು ಪತ್ರಿಕೆಯಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಗಿಡಗಂಟೆಗಳನ್ನು ತೆರವುಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ದೇವಾಲಯದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
>
> –ಯೋಗೇಶ್ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ, ಬೇಲೂರು.

● **ಪತ್ರಿಕಾ ವರದಿಗೆ ಭಕ್ತರ ಮೆಚ್ಚುಗೆ**

ಪ್ರಜಾ ಭಾರತ ಪತ್ರಿಕೆಯ ವರದಿಗೆ ಸ್ಪಂದಿಸಿ ಕ್ರಮ ಕೈಗೊಂಡಿರುವುದಕ್ಕೆ ದೇವಾಲಯದ ಭಕ್ತರು ಹಾಗೂ ಪ್ರವಾಸಿಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವಿಶ್ವಪರಂಪರೆಯ ಮಹತ್ವ ಹೊಂದಿರುವ ಈ ಐತಿಹಾಸಿಕ ದೇವಾಲಯದ ಭದ್ರತೆ, ಸ್ವಚ್ಛತೆ ಮತ್ತು ಸಂರಕ್ಷಣೆಯನ್ನು ಆಡಳಿತ ವರ್ಗ ನಿರಂತರವಾಗಿ ಕಾಪಾಡಬೇಕು. ಕೇವಲ ವರದಿ ಪ್ರಕಟವಾದಾಗ ಮಾತ್ರವಲ್ಲದೆ, ಆಗಿಂದಾಗ್ಗೆ ಪರಿಶೀಲನೆ ನಡೆಸಿ ಲೋಪದೋಷಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಜನಸಮಸ್ಯೆಗಳಿಗೆ ಧ್ವನಿಯಾಗಿ, ಆಡಳಿತದ ಗಮನ ಸೆಳೆದು, ಪರಿಹಾರದತ್ತ ಹೆಜ್ಜೆ ಇಡುವುದೇ ಪತ್ರಿಕೋದ್ಯಮದ ನಿಜವಾದ ಶಕ್ತಿ ಎಂಬುದಕ್ಕೆ ಬೇಲೂರಿನ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ನಡೆದ ಈ ಬೆಳವಣಿಗೆ ಸಾಕ್ಷಿಯಾಗಿದೆ.

ಇಂದಿರಾನಗರಕ್ಕೆ ಮೂಲಸೌಕರ್ಯ ಕಲ್ಪಿಸಲು ಕೆಆರ್‌ಎಸ್ ಪಕ್ಷ ಆಗ್ರಹ

ರಸ್ತೆ, ಬೀದಿ ದೀಪ, ಕುಡಿಯುವ ನೀರಿಲ್ಲದೆ ನಿವಾಸಿಗಳ ಪರದಾಟ

ಪ್ರಜಾ ಭಾರತ ವರದಿ

ಅರೇಹಳ್ಳಿ: ಮನೆಗಳಿದ್ದರೂ ಸಮರ್ಪಕ ರಸ್ತೆ, ಬೀದಿ ದೀಪ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಪರದಾಡುವಂತಾಗಿದೆ. ಹಲವು ಬಾರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರೂ ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಬೇಲೂರು ತಾಲೂಕು ಅರೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂದಿರಾನಗರದ ನಿವಾಸಿಗಳು ಕೆಆರ್‌ಎಸ್ ಪಕ್ಷದ ಮುಖಂಡರ ಮೊರೆ ಹೋಗಿದ್ದಾರೆ.

ಇಂದಿರಾನಗರದ 10ರಿಂದ 15 ಮನೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ, ಬೀದಿ ದೀಪ ಹಾಗೂ ನೀರಿನಂತಹ ಮೂಲಭೂತ ಸೌಕರ್ಯಗಳ ಕೊರತೆಯಿಂದ ನಿವಾಸಿಗಳು ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ.



ಈ ಕುರಿತು ಗ್ರಾಮ ಪಂಚಾಯಿತಿಗೆ ಐದಾರು ಬಾರಿ ಅರ್ಜಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂಬುದು ನಿವಾಸಿಗಳ ಆರೋಪವಾಗಿದೆ.

ನಿವಾಸಿಗಳ ಮನವಿಗೆ ಸ್ಪಂದಿಸಿದ ಕೆಆರ್‌ಎಸ್ ಪಕ್ಷದ ಅರೇಹಳ್ಳಿ ಹೋಬಳಿ ಅಧ್ಯಕ್ಷ ಕುಮಾರ್ ಹಾಗೂ ಪಕ್ಷದ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕುಮಾರ್, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಸ್ಥಳೀಯ ಆಡಳಿತದ ಜವಾಬ್ದಾರಿಯಾಗಿದೆ.

ಹಲವು ಬಾರಿ ಮನವಿ ಸಲ್ಲಿಸಿದರೂ ಸಮಸ್ಯೆ ಪರಿಹಾರವಾಗದಿರುವುದು ವಿಷಾದನೀಯ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು, ತಹಶೀಲ್ದಾರ್ ಹಾಗೂ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಇಂದಿರಾನಗರದ ನಿವಾಸಿಗಳಿಗೆ ಅಗತ್ಯ ಸೌಲಭ್ಯಗಳನ್ನು ತುರ್ತಾಗಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೆಆರ್‌ಎಸ್ ಪಕ್ಷದ ಸದಸ್ಯರಾದ ಆಟೋ ಸುನಿಲ್, ರಫೀಕ್, ಆಟೋ ಧರ್ಮ, ಮಂಜು ಹಾಗೂ ನಿವಾಸಿಗಳಾದ ನಿರ್ವಾಣಯ್ಯ, ಶಾಹೀನ, ಅನ್ವರ್, ರಾಜು ಪೂಜಾರ್, ಮಂಜುಳಾ ಉಪಸ್ಥಿತರಿದ್ದರು.

ಹಾಸನಾಂಬ ಜಾತ್ರೆ: ಬ್ಯಾರಿಕೇಡ್‌ಗಳಿಂದ ವರ್ತಕರ ವ್ಯಾಪಾರಕ್ಕೆ ಹೊಡೆತ

ಪ್ರಜಾ ಭಾರತ ವರದಿ

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ನಗರದ ಹೊಸಲೈನ್ ರಸ್ತೆ–ಸಂತೇಪೇಟೆ ವರೆಗಿನ ರಾಜಬೀದಿಯಲ್ಲಿ ಬ್ಯಾರಿಕೇಡ್ ಹಾಗೂ ಜರ್ಮನ್ ಟೆಂಟ್‌ಗಳನ್ನು ಅಳವಡಿಸಿರುವುದರಿಂದ ವ್ಯಾಪಾರ–ವಹಿವಾಟು ಸ್ಥಗಿತಗೊಂಡು ಸ್ಥಳೀಯ ವರ್ತಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಮಾನ್ಯವಾಗಿ ದೇವಾಲಯದ ಗರ್ಭಗುಡಿ ತೆರೆಯುವ ಎರಡು ದಿನ ಮುನ್ನ ಬ್ಯಾರಿಕೇಡ್ ಅಳವಡಿಸಲಾಗುತ್ತಿತ್ತು. ಆದರೆ ಈ ಬಾರಿ ವಾರಕ್ಕೂ ಮುನ್ನವೇ ವ್ಯವಸ್ಥೆ ಮಾಡಿರುವುದರಿಂದ ಬಾಳೆಹಣ್ಣಿನ ಮಂಡಿಗಳು, ಹೋಟೆಲ್‌ಗಳು, ದಿನಸಿ ಅಂಗಡಿಗಳು, ದ್ವಿಚಕ್ರ ವಾಹನಗಳ ಶೋರೂಂ ಸೇರಿದಂತೆ ಹಲವು ವ್ಯಾಪಾರ ಮಳಿಗೆಗಳಿಗೆ ಗ್ರಾಹಕರ ಸಂಚಾರ ಕಡಿಮೆಯಾಗಿ ಆರ್ಥಿಕ ನಷ್ಟ ಉಂಟಾಗಿದೆ.

ಭಕ್ತರ ಅನುಕೂಲಕ್ಕಾಗಿ ಸಹಕರಿಸುತ್ತಿರುವ ಸ್ಥಳೀಯ ವರ್ತಕರ ಸಂಕಷ್ಟವನ್ನು ಜಿಲ್ಲಾಡಳಿತ ಪರಿಗಣಿಸಿ, ಸೂಕ್ತ ಪರಿಹಾರ ಅಥವಾ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಸ್ಯಾಕ್ಸಫೋನ್ ನಾದದಲ್ಲಿ ಚೂಡಾಮಣಿಯ ಸ್ವರಸಾಮ್ರಾಜ್ಯ

ಮೈಸೂರು ದಸರಾದಿಂದ ಹಂಪಿ ಉತ್ಸವದವರೆಗೆ ಕಲಾ ಪಯಣ ।15 ವರ್ಷಗಳ ಸಂಗೀತ ಸೇವೆಗೆ ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯ ಗೌರವ

ಪ್ರಜಾ ವಿಶೇಷ

ಸಂಗೀತವೆಂಬುದು ಭಾಷೆ, ಗಡಿ ಮತ್ತು ಭಾವನೆಗಳ ಎಲ್ಲೆಯನ್ನು ಮೀರಿ ಮನುಷ್ಯನ ಹೃದಯವನ್ನು ತಲುಪುವ ಅದ್ಭುತ ಕಲೆ. ಸಂಗೀತದ ಪ್ರತಿಯೊಂದು ಸ್ವರವೂ ಮನಸ್ಸಿಗೆ ಮುದ ನೀಡಿದರೆ, ವಾದ್ಯಸಂಗೀತದ ನಾದವು ಶ್ರೋತೃಗಳ ಹೃದಯದಲ್ಲಿ ವಿಶಿಷ್ಟ ಅನುಭೂತಿಯನ್ನು ಮೂಡಿಸುತ್ತದೆ. ಇಂತಹ ಸಂಗೀತ ಲೋಕದಲ್ಲಿ ಸ್ಯಾಕ್ಸಫೋನ್ ವಾದನದ ಮೂಲಕ ತಮ್ಮದೇ ಆದ ಗುರುತನ್ನು ಮೂಡಿಸಿಕೊಂಡು, ಸುಮಾರು 15 ವರ್ಷಗಳಿಂದ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿರುವವರು ಬೇಲೂರಿನ ಎಂ.ಎಸ್. ಚೂಡಾಮಣಿ.

ಕೌಟುಂಬಿಕ ಜೀವನದ ಜವಾಬ್ದಾರಿಗಳ ನಡುವೆಯೂ ಸಂಗೀತದ ಮೇಲಿನ ಒಲವನ್ನು ಜೀವಂತವಾಗಿಟ್ಟುಕೊಂಡು, ನಾಡಿನ ಪ್ರತಿಷ್ಠಿತ ಸಾಂಸ್ಕೃತಿಕ ವೇದಿಕೆಗಳಲ್ಲಿ ತಮ್ಮ ವಾದನ ಪ್ರತಿಭೆಯನ್ನು ಪ್ರದರ್ಶಿಸುತ್ತಾ ಬಂದಿರುವ ಚೂಡಾಮಣಿ ಅವರ ಕಲಾ ಪಯಣ ಗಮನಾರ್ಹವಾಗಿದೆ. ಮೈಸೂರು ದಸರಾ ಸಾಂಸ್ಕೃತಿಕ ಉತ್ಸವದಿಂದ ಹಂಪಿ ಉತ್ಸವದವರೆಗೆ, ಕನ್ನಡ ಸಾಹಿತ್ಯ ಸಮ್ಮೇಳನದಿಂದ ಹಾಸನಾಂಬಾ ಉತ್ಸವದವರೆಗೆ ಹಲವು ಮಹತ್ವದ ವೇದಿಕೆಗಳಲ್ಲಿ ಸ್ಯಾಕ್ಸಫೋನ್ ನಾದವನ್ನು ಮೊಳಗಿಸಿರುವ ಇವರು, ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಸಾಧನೆಯ ಹಾದಿಯನ್ನು ರೂಪಿಸಿಕೊಂಡಿದ್ದಾರೆ.

ಮೈಸೂರಿನಲ್ಲಿ ಜನನ, ಬೇಲೂರಿನಲ್ಲಿ ಬದುಕು–ಸಂಗೀತದ ನಂಟು

ಶ್ರೀನಿವಾಸ್ ಮತ್ತು ನಳಿನ ದಂಪತಿಗಳ ಪುತ್ರಿಯಾಗಿ 1988ರ ಮೇ 7ರಂದು ಸಾಂಸ್ಕೃತಿಕ ಪರಂಪರೆಯ ತವರೂರು ಮೈಸೂರಿನಲ್ಲಿ ಜನಿಸಿದ ಎಂ.ಎಸ್. ಚೂಡಾಮಣಿ, ದ್ವಿತೀಯ ಪಿಯುಸಿ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆ.

ನಂತರ ಬೇಲೂರಿನ ಶ್ರೀ ನರಸಿಂಹಸ್ವಾಮಿ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಅವರು, ಪ್ರಸ್ತುತ ಹಾಸನ ಜಿಲ್ಲೆಯ ಬೇಲೂರಿನ ಪಂಪ್ ಹೌಸ್ ರಸ್ತೆ, ಕನಕ ಗಾರ್ಡನ್‌ನಲ್ಲಿ ವಾಸವಾಗಿದ್ದಾರೆ.

ಬದುಕಿನ ವಿವಿಧ ಜವಾಬ್ದಾರಿಗಳ ನಡುವೆಯೂ ಸಂಗೀತದ ಮೇಲಿನ ತಮ್ಮ ಆಸಕ್ತಿಯನ್ನು ಮುಂದುವರಿಸಿಕೊಂಡು ಬಂದಿರುವುದು ಚೂಡಾಮಣಿ ಅವರ ಪಯಣದ ವಿಶೇಷತೆ. ಸಂಗೀತವನ್ನು ಕೇವಲ ಹವ್ಯಾಸವಾಗಿ ಕಾಣದೆ, ಅದನ್ನು ಕಲಾ ಸೇವೆಯ ಮಾಧ್ಯಮವನ್ನಾಗಿಸಿಕೊಂಡು ಸುಮಾರು ಒಂದೂವರೆ ದಶಕದಿಂದ ಸ್ಯಾಕ್ಸಫೋನ್ ವಾದನ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ.

● **ಸ್ಯಾಕ್ಸಫೋನ್ ನಾದದಲ್ಲಿ ಅನಾವರಣಗೊಂಡ ಪ್ರತಿಭೆ**

ವಾದ್ಯಸಂಗೀತದಲ್ಲಿ ಪ್ರತಿಯೊಂದು ವಾದ್ಯಕ್ಕೂ ತನ್ನದೇ ಆದ ವಿಶಿಷ್ಟ ಧ್ವನಿಸೌಂದರ್ಯವಿದೆ. ಅವುಗಳಲ್ಲಿ ಸ್ಯಾಕ್ಸಫೋನ್ ತನ್ನ ಮಧುರ ನಾದ, ವಿಭಿನ್ನ ಸ್ವರಶೈಲಿ ಹಾಗೂ ಭಾವಪೂರ್ಣ ಸಂಗೀತ ಅಭಿವ್ಯಕ್ತಿಯಿಂದ ಶ್ರೋತೃಗಳನ್ನು ಆಕರ್ಷಿಸುವ ವಾದ್ಯವಾಗಿದೆ.



ಈ ವಾದ್ಯದ ಮೂಲಕ ಸಂಗೀತದ ಸೊಬಗನ್ನು ಜನರಿಗೆ ತಲುಪಿಸುತ್ತಿರುವ ಚೂಡಾಮಣಿ, ತಮ್ಮ ಸತತ ಕಲಾ ಪಯಣದ ಮೂಲಕ ಸಂಗೀತ ಕ್ಷೇತ್ರದೊಂದಿಗೆ ನಂಟನ್ನು ಗಟ್ಟಿಗೊಳಿಸಿಕೊಂಡಿದ್ದಾರೆ.

ಸುಮಾರು 15 ವರ್ಷಗಳ ಅನುಭವ ಹೊಂದಿರುವ ಅವರು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ವಾದನ ಕೌಶಲವನ್ನು ಪ್ರದರ್ಶಿಸಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವುದು, ವಿಭಿನ್ನ ವೇದಿಕೆ ಗಳಲ್ಲಿ ಕಲಾ ಪ್ರದರ್ಶನ ನೀಡುವುದು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಭಾಗವಾಗುವುದು ಅವರ ಕಲಾ ಸೇವೆಯ ಪ್ರಮುಖ ಅಂಶಗಳಾಗಿವೆ.

● **ಮೈಸೂರು ದಸರೆಯಿಂದ ಹಂಪಿ ಉತ್ಸವದವರೆಗೆ ಕಲಾ ಸೇವೆ**

ಚೂಡಾಮಣಿ ಅವರ ಕಲಾ ಪಯಣಕ್ಕೆ ನಾಡಿನ ಹಲವು ಪ್ರತಿಷ್ಠಿತ ಸಾಂಸ್ಕೃತಿಕ ವೇದಿಕೆಗಳು ಸಾಕ್ಷಿಯಾಗಿವೆ. ಕನ್ನಡ ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಲಾದ ಸಾಂಸ್ಕೃತಿಕ ಉತ್ಸವಗಳಲ್ಲಿ ಭಾಗವಹಿಸಿರುವ ಅವರು, ಮೈಸೂರು ದಸರಾ ಸಾಂಸ್ಕೃತಿಕ ಉತ್ಸವ, 67ನೇ ಕನ್ನಡ ಸಾಹಿತ್ಯ ಸಮ್ಮೇಳನ, ಹಂಪಿ ಉತ್ಸವ ಹಾಗೂ ಹಾಸನಾಂಬಾ ಉತ್ಸವಗಳಲ್ಲಿ ಸ್ಯಾಕ್ಸಫೋನ್ ವಾದನದ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ನಾಡಿನ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವ ಇಂತಹ ಪ್ರಮುಖ ಉತ್ಸವಗಳಲ್ಲಿ ಪಾಲ್ಗೊಳ್ಳುವುದು ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ವಿಶಾಲ ಪ್ರೇಕ್ಷಕ ವಲಯದ ಮುಂದೆ ಅನಾವರಣಗೊಳಿಸಲು ದೊರೆಯುವ ಅವಕಾಶವಾಗಿದೆ. ಈ ವೇದಿಕೆಗಳಲ್ಲಿ ಕಲಾ ಸೇವೆ ಸಲ್ಲಿಸಿರುವ ಚೂಡಾಮಣಿ, ಸಂಗೀತದ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



ಇದರ ಜತೆಗೆ ಶ್ರೀ ಶಾರದಾ ಕಲಾದೇವಿ ಸಂಘದ ವೇದಿಕೆ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿಯೂ ಅವರು ಭಾಗವಹಿಸುತ್ತಾ ಬಂದಿದ್ದಾರೆ. ವಿವಿಧ ವೇದಿಕೆಗಳಲ್ಲಿ ಸ್ಯಾಕ್ಸಫೋನ್ ವಾದನ ಪ್ರದರ್ಶಿಸುವ ಮೂಲಕ ಸಂಗೀತಾಸಕ್ತರ ಗಮನ ಸೆಳೆದಿರುವುದು ಅವರ ಕಲಾ ಪಯಣದ ಮತ್ತೊಂದು ಪ್ರಮುಖ ಅಂಶವಾಗಿದೆ.

● **ಕಲಾ ಸೇವೆಗೆ ಸಂದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ**

ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ನಿರಂತರ ಪರಿಶ್ರಮ, ಆಸಕ್ತಿ ಮತ್ತು ಬದ್ಧತೆ ಅಗತ್ಯ. ಅದರಲ್ಲೂ ಕಲಾ ಕ್ಷೇತ್ರದಲ್ಲಿ ದೀರ್ಘಕಾಲ ತೊಡಗಿಸಿ ಕೊಂಡು ತಮ್ಮ ಪ್ರತಿಭೆಯನ್ನು ನಿರಂತರ ವಾಗಿ ಪ್ರದರ್ಶಿಸುವುದು ವಿಶೇಷ ಪ್ರಯತ್ನವನ್ನು ಬೇಡುತ್ತದೆ.

ಇಂತಹ ಸಂಗೀತ ಪಯಣದಲ್ಲಿ ಎಂ.ಎಸ್. ಚೂಡಾಮಣಿ ಅವರಿಗೆ ಸಂದಿರುವ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಮಹತ್ವದ ಗೌರವವಾಗಿದೆ.

ಸಂಗೀತ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ ಕಲಾ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಪ್ರಶಸ್ತಿ–ಪುರಸ್ಕಾರಗಳು ಕಲಾವಿದರ ಸಾಧನೆಯನ್ನು ಗುರುತಿಸುವುದರ ಜತೆಗೆ ಮುಂದಿನ ದಿನಗಳಲ್ಲಿಯೂ ತಮ್ಮ ಕ್ಷೇತ್ರದಲ್ಲಿ ಇನ್ನಷ್ಟು ತೊಡಗಿಸಿಕೊಳ್ಳಲು ಪ್ರೇರಣೆ ನೀಡುತ್ತವೆ. ಚೂಡಾಮಣಿ ಅವರಿಗೂ ಈ ಗೌರವ ಅವರ ಕಲಾ ಪಯಣದ ಸ್ಮರಣೀಯ ಮೈಲಿಗಲ್ಲಾಗಿದೆ.

● **ಕಲೆಯ ಮೇಲಿನ ಬದ್ಧತೆಯೇ ಸಾಧನೆಯ ಶಕ್ತಿ**

ಕಲಾವಿದರ ಪಯಣವೆಂದರೆ ಕೇವಲ ವೇದಿಕೆ ಏರಿ ಪ್ರದರ್ಶನ ನೀಡುವುದಲ್ಲ; ಕಲೆಯೊಂದಿಗೆ ನಿರಂತರ ನಂಟು ಬೆಳೆಸಿಕೊಂಡು, ತಮ್ಮ ಪ್ರತಿಭೆಯನ್ನು ಉಳಿಸಿಕೊಂಡು, ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ.

ಈ ನಿಟ್ಟಿನಲ್ಲಿ ಸುಮಾರು 15 ವರ್ಷಗಳಿಂದ ಸ್ಯಾಕ್ಸಫೋನ್ ವಾದನದ ಮೂಲಕ ಕಲಾ ಸೇವೆ ಸಲ್ಲಿಸುತ್ತಿರುವ ಚೂಡಾಮಣಿ ಅವರ ಪಯಣ ಗಮನ ಸೆಳೆಯುತ್ತದೆ.

ಕೌಟುಂಬಿಕ ಬದುಕಿನ ಜತೆಗೆ ಕಲಾ ಬದುಕನ್ನೂ ಮುಂದುವರಿಸಿಕೊಂಡು ಹೋಗುತ್ತಿರುವ ಅವರು, ನಾಡಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಆಸಕ್ತಿಗೆ ಜೀವ ತುಂಬಿದ್ದಾರೆ.

ಕೌಟುಂಬಿಕ ಬದುಕಿನೊಂದಿಗೆ ಸಂಗೀತ ಸಾಧನೆಗೆ ಸಮರ್ಪಣೆ - ಪ್ರತಿಷ್ಠಿತ ಸಾಂಸ್ಕೃತಿಕ ವೇದಿಕೆಗಳಲ್ಲಿ ಪ್ರತಿಭೆಯ ಅನಾವರಣ

ಮೈಸೂರು, ಹಂಪಿ, ಹಾಸನ ಸೇರಿದಂತೆ ವಿವಿಧ ಸಾಂಸ್ಕೃತಿಕ ವೇದಿಕೆಗಳಲ್ಲಿ ಭಾಗವಹಿಸಿರುವುದು ಅವರ ಕಲಾ ಪಯಣದ ವ್ಯಾಪ್ತಿಯನ್ನು ಪರಿಚಯಿಸುತ್ತದೆ.

● **ಬೇಲೂರಿನ ಕಲಾ ವಲಯಕ್ಕೆ ಹೆಮ್ಮೆಯ ಸಂಗೀತ ಪಯಣ**

ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವ ಹೊಂದಿರುವ ಬೇಲೂರಿನಲ್ಲಿ ನೆಲೆಸಿರುವ ಎಂ.ಎಸ್. ಚೂಡಾಮಣಿ ಅವರು, ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಆದ ಗುರುತನ್ನು ರೂಪಿಸಿಕೊಂಡಿದ್ದಾರೆ. ಸ್ಯಾಕ್ಸಫೋನ್ ವಾದನದ ಮೂಲಕ ಕಲಾ ಸೇವೆ ಸಲ್ಲಿಸುತ್ತಾ, ವಿವಿಧ ಉತ್ಸವಗಳು ಮತ್ತು ಸಾಂಸ್ಕೃತಿಕ ವೇದಿಕೆಗಳಲ್ಲಿ ಭಾಗವಹಿಸಿರುವ ಅವರ ಅನುಭವ ಗಮನಾರ್ಹವಾಗಿದೆ.

ಒಟ್ಟಾರೆ, ಮೈಸೂರಿನಲ್ಲಿ ಆರಂಭವಾದ ಜೀವನ ಪಯಣ ಬೇಲೂರಿನಲ್ಲಿ ಮುಂದುವರಿಯುತ್ತಿದ್ದು, ಸಂಗೀತದ ಮೇಲಿನ ಆಸಕ್ತಿ ಮತ್ತು ಕಲಾ ಸೇವೆಯ ಮೂಲಕ ಚೂಡಾಮಣಿ ಅವರು ತಮ್ಮ ಬದುಕಿಗೆ ವಿಶಿಷ್ಟ ಆಯಾಮವನ್ನು ನೀಡಿದ್ದಾರೆ. ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯ ಗೌರವದೊಂದಿಗೆ ಅವರ 15 ವರ್ಷಗಳ ಕಲಾ ಪಯಣ ಮತ್ತಷ್ಟು ಅರ್ಥಪೂರ್ಣವಾಗಿದೆ. ಮುಂದಿನ ದಿನಗಳಲ್ಲಿಯೂ ಸ್ಯಾಕ್ಸಫೋನ್‌ನ ಮಧುರ ನಾದದ ಮೂಲಕ ಇನ್ನಷ್ಟು ಸಾಂಸ್ಕೃತಿಕ ವೇದಿಕೆಗಳಲ್ಲಿ ಭಾಗವಹಿಸಿ, ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲಿ ಎಂಬುದು ಕಲಾಭಿಮಾನಿಗಳ ಆಶಯವಾಗಿದೆ.

ವಿಶೇಷತೆ: ಸುಮಾರು 15 ವರ್ಷಗಳ ಸ್ಯಾಕ್ಸಫೋನ್ ವಾದನ ಅನುಭವ, ಮೈಸೂರು ದಸರಾ–ಹಂಪಿ ಉತ್ಸವ ಸೇರಿದಂತೆ ಪ್ರಮುಖ ಸಾಂಸ್ಕೃತಿಕ ವೇದಿಕೆಗಳಲ್ಲಿ ಕಲಾ ಪ್ರದರ್ಶನ ಹಾಗೂ ಕಲಾ ಸೇವೆಗೆ ಸಂದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ–ಇವು ಎಂ.ಎಸ್. ಚೂಡಾಮಣಿ ಅವರ ಸಂಗೀತ ಪಯಣದ ಪ್ರಮುಖ ಗುರುತುಗಳಾಗಿವೆ.

ನನ್ನ ಸಾಧನೆಯ ಬೆನ್ನೆಲುಬು ನನ್ನ ಪತಿ

> "ನನ್ನ ಸಂಗೀತ ಪಯಣದಲ್ಲಿ ಸುಖ–ದುಃಖಗಳಲ್ಲೂ, ಸಾಧನೆಯ ಹಾದಿಯಲ್ಲೂ ನನಗೆ ಧೈರ್ಯ ತುಂಬಿ, ಪ್ರೋತ್ಸಾಹ ನೀಡಿ, ಬೆನ್ನೆಲುಬಾಗಿ ನಿಂತವರು ನನ್ನ ಪ್ರೀತಿಯ ಪತಿ ನರಸಿಂಹಸ್ವಾಮಿ. ಅವರ ಸಹಕಾರ, ಪ್ರೀತಿ ಮತ್ತು ಪ್ರೋತ್ಸಾಹವೇ ನನ್ನ ಕಲಾ ಪಯಣಕ್ಕೆ ದೊಡ್ಡ ಶಕ್ತಿ. ನನ್ನ ಸಾಧನೆಯಲ್ಲಿ ಅವರ ಪಾತ್ರ ಅತ್ಯಂತ ಮಹತ್ವದ್ದು. ನನ್ನ ಈ ಕಲಾ ಪಯಣದಲ್ಲಿ ಅವರಿಗೆ ಸದಾ ಕೃತಜ್ಞಳಾಗಿರುತ್ತೇನೆ."
>
> – ಎಂ.ಎಸ್. ಚೂಡಾಮಣಿ, ಸ್ಯಾಕ್ಸಫೋನ್ ಕಲಾವಿದೆ, ಬೇಲೂರು

Printed, Published & Owned By Dinesh B G and Printed at Honalu Graphic, Word No. 2, Ashok Road Behind Stadium, Satyamangala Village, Vidya Nagara Hassan District, Karnataka - 573201 and Published at Ward No.1 Behind Budda School, Halebeedu Road Shanthi Nagara Bantenahalli Belur Taluk Hassan Dist, Karnataka - 573115 - Editor Dinesh B G